# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ನಿರ್ದೇಶಕರು ನಗರ ಯೋಜನೆ ಯಲಹಂಕ ವಲಯ ಬೆಂಗಳೂರು-92.

ಬೆಂ.ಮ.ಪಾ/ಯ.ವ/ನಯೋಎ/ಪ್ರಾ.ಪ್ರ.ಪ/ 14 /2017-18 ದಿನಾಂಕ: 04-10-2017

## ಪ್ರಾರಂಭಿಕ ಪ್ರಮಾಣ ಪತ್ರ,

ಮಾನ್ಯರೇ,

ವಿಷಯ :- ಯಲಹಂಕ ವಲಯ ನಗರ ಯೋಜನೆ ವಿಭಾಗದಿಂದ ಅನುಮೋದಿತವಾದ ಸುವರ್ಣ ಕಟ್ಟಡ ಪರವಾನಗಿ ಎಲ್.ಪಿ.ಸಂಖ್ಯೆ: Ad.com.YLK/910/16-17 ದಿನಾಂಕ ; 07-04-2017 ರ ಕಟ್ಟಡ ಪ್ರಾರಂಭಿಸಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ :-1. ನಿಮ್ಮ ಅರ್ಜಿ ದಿನಾಂಕ: 25-09-2017

2. ಮುಖ್ಯ ಅಭಿಯಂತರರು ಯಲಹಂಕ ವಲಯ ರವರ ಆದೇಶ ದಿನಾಂಕ:28-09-2017

******

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಯಲಹಂಕ ವಲಯ, ಜಕ್ಕೂರು ವಾರ್ಡ್ ನಂ.05, ತಿರುಮೇನಹಳ್ಳಿ ಆಸ್ತಿ ಖಾತಾ ಸಂಖ್ಯೆ: 131/3/1 ರಲ್ಲಿ ಸ್ಟಿಲ್ಟ್+ನೆಲ+3 ವಸತಿ ಸಮುಚ್ಚಯ ಕಟ್ಟಡ ಕಟ್ಟಲು ಪ್ರಾರಂಭಿಕ ಪ್ರಮಾಣ ಪತ್ರವನ್ನು ಕೋರಿ ದಿನಾಂಕ:25-09-2017 ರಂದು ನೀಡಿರುವ ಅರ್ಜಿ ಮೇರೆಗೆ ದಿನಾಂಕ::28-09-2017 ರಂದು ಸ್ಥಳ ಪರಿಶೀಲಿಸಲಾಗಿ ಯಲಹಂಕ ವಲಯ ನಗರ ಯೋಜನೆ ವಿಭಾಗದಿಂದ ಅನುಮೋದನೆಯಾದ ಸುವರ್ಣ ಪರವಾನಗಿ ಎಲ್.ಪಿ.ಸಂಖ್ಯೆ Ad.com.YLK/910/16-17 ದಿನಾಂಕ:07-04-2017 ರ ಮೇರೆಗೆ ಸದರಿ ನಿವೇಶನದಲ್ಲಿ ಬ್ಲಾಕ್ ಎ ಮತ್ತು ಬ್ಲಾಕ್ ಬಿ ಕಟ್ಟಡಗಳ ತಳಪಾಯ ಕಾಮಗಾರಿ ಮುಗಿದು ಆರ್.ಸಿ.ಸಿ ಕಂಬಗಳು ಅಳವಡಿಸುವ ಕಾಮಗಾರಿ ಚಾಲನೆಯಲ್ಲಿರುತ್ತದೆ, ಹಾಗೂ ಮಂಜೂರಾದ ನಕ್ಷೆಯಂತೆ ಕಟ್ಟಡವನ್ನು ನಿರ್ಮಿಸುತ್ತಿರುವುದು ಕಂಡು ಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಕಟ್ಟಡ ಕೆಲಸ ಪ್ರಾರಂಭಿಸುವ **"ಪ್ರಾರಂಭಿಕ ಪ್ರಮಾಣ ಪತ್ರ"** ನೀಡಲಾಗಿದೆ. ಸದರಿ ಪ್ರಾರಂಭಿಕ ಪ್ರಮಾಣ ಪತ್ರಕ್ಕೆ **ಶುಲ್ಕ ರೂ.1,65000/- ಡಿ.ಡಿ.ನಂ: 220444** ದಿನಾಂಕ: 03-10-2017 **ಬ್ಯಾಂಕ್ ಆಫ್ ಬರೋಡಾ** ರಂತೆ ಅರ್ಜಿದಾರರು ಡಿ.ಡಿ ನೀಡಿರುತ್ತಾರೆ. ಈ ಕಛೇರಿಯ ಅಂತರ್ಜಾಲ ತಂತ್ರಾಂಶದ ರಶೀದಿ ಸಂಖ್ಯೆ: RE-ifms223-TP/000793 ದಿನಾಂಕ: 04-10-2017 ರಂದು ಪಡೆದಿರುತ್ತೆ.

1. ಸದರಿ ಕಟ್ಟಡ ಕೆಲಸವನ್ನು ಕಡ್ಡಾಯವಾಗಿ ಅನುಮೋದಿತ ನಕ್ಷೆ ಹಾಗೂ ಕಟ್ಟಡ ಬೈಲಾ ಪ್ರಕಾರ ಯಾವುದೇ ಬದಲಾವಣೆ ಹಾಗೂ ಒತ್ತುವರಿಗಳಿಲ್ಲದೆ ನಿಯಮಾನುಸಾರ ನಿರ್ವಹಿಸತಕ್ಕದ್ದು.
2. ಸದರಿ ಕಟ್ಟಡದ ತಳಪಾಯದ ನಿರ್ಮಾಣ ಕಾಮಗಾರಿ ಪೂರ್ಣಗೊಳ್ಳುವ ಹಂತ ತಲುಪಿದಾಗ ಅಥವಾ ಆರ್.ಸಿ.ಸಿ. ಕಂಬ ಅಳವಡಿಸುವ ಹಂತದಲ್ಲಿ ಸದರಿ ಕೆಲಸದ ಪ್ರಗತಿ ಬಗ್ಗೆ ಮಹಾನಗರ ಪಾಲಿಕೆಗೆ ವರದಿ ಸಲ್ಲಿಸುವುದು. ಆಗಿಂದಾಗ್ಗೆ ಕಟ್ಟಡವನ್ನು ಅನುಮೋದಿತ ನಕ್ಷೆಯನುಸಾರ ಹಾಗೂ ಕಡ್ಡಾಯವಾಗಿ ಬೈಲಾ ಪ್ರಕಾರ ನಿರ್ಮಾಣ ಕಾರ್ಯ ನಿರ್ವಹಿಸಲಾಗುತ್ತಿದೆಯೇ? ಎಂಬುದರ ಬಗ್ಗೆ ಪರಿಶೀಲಿಸಲು ಮಹಾನಗರ ಪಾಲಿಕೆಯು ಅಧಿಕಾರವನ್ನು ಹೊಂದಿರುತ್ತದೆ.
3. ಅರ್ಜಿದಾರರು ತಮ್ಮ ಸ್ವತ್ತಿನಲ್ಲಿಯೇ ಕಟ್ಟಡ ನಿರ್ಮಾಣದ ಕೆಲಸಗಾರರಿಗೆ ತಾತ್ಕಾಲಿಕವಾಗಿ ಶೆಡ್ ಮತ್ತು ಶೌಚಾಲಯವನ್ನು ಅಕ್ಕಪಕ್ಕದ ಸ್ವತ್ತಿನವರಿಗೆ ತೊಂದರೆಯಾಗದಂತೆ ನಿರ್ಮಿಸುವುದು.

04/10/17

ಸಹಾಯಕ ನಿರ್ದೇಶಕರು
ನಗರ ಯೋಜನೆ -
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಯಲಹಂಕ ವಲಯ, ಬ್ಯಾಟರಾಯನಪುರ,
ಬೆಂಗಳೂರು - 92.

4/10

ರವರಿಗೆ,
ಶ್ರೀ.ಎಂ.ಶ್ರೀನಿವಾಸ್
ನಂ131/3/1, ತಿರುಮೇನಹಳ್ಳಿ,
ಜಕ್ಕೂರು
ವಾರ್ಡ್ ಸಂಖ್ಯೆ:05
ಬೆಂಗಳೂರು

2017-10-8 15:02